ಎಂ.ಎಸ್. ಆಶಾದೇವಿ

# ವೀಣೆ ಮಿಡಿಸಿದ ಹೆಣ್ಣು ಹುಲಿ

ನೂರ್ ಇನಾಯತ್ ಖಾನ್, ಇವಳು ಟಿಪ್ಪು ಸುಲ್ತಾನನ ಮರಿ ಮರಿ ಮೊಮ್ಮಗಳು, ಇವಳು ಅಕ್ಷರಶಃ ಧರೆಗಿಳಿದ ಅಪ್ಸರೆ, ಇವಳು ಮುಟ್ಟಿದಲ್ಲಿ ಮಿಡಿಯಬಲ್ಲ ಕಾವ್ಯಪ್ರೇಮಿ, ಕಲಾವಿದೆ. ಇವಳು ಆರ್ದ್ರ ಹೃದಯದ ಅಪ್ಪಟ ಹೆಣ್ಣು, ಇವಳು ವಜ್ರಕಠೋರ ಹುಟ್ಟು ಹೋರಾಟಗಾರ್ತಿ, ಇವಳು ಅತ್ಯಂತ ಪ್ರಖರವಾಗಿ ಆಲೋಚಿಸಬಲ್ಲ ಬುದ್ಧಿಜೀವಿ. ಈ ಪಟ್ಟಿ ಮುಗಿಯುವುದು ಕಷ್ಟ. ಇವಳು ಹೆಣ್ಣಿನಲ್ಲಿ ಅಥವಾ ಹೆಣ್ಣು ಮಾತ್ರವೇಕೆ ಮನುಷ್ಯ ಜೀವಿಯಲ್ಲಿ ಏಕತ್ರಗೊಳ್ಳಬೇಕೆಂದು ನಾವು ಬಯಸುವ ಗುಣಗಳ ಸಾಕ್ಷಾತ್ಕಾರ.

ಇವಳ ಜೀವನ ಕಥನವನ್ನು ಓದುತ್ತಿದ್ದರೆ, ಇದು ವಾಸ್ತವವೋ, ಯಾರೋ ಅಪಾರ ಕಲ್ಪನೆಯಲ್ಲಿ ಹೆಣೆದಿರುವ ವ್ಯಕ್ತಿತ್ವವೋ ಎನ್ನುವ ಅನುಮಾನ ಕಾಡತೊಡಗುತ್ತದೆ. ಯಾವುದೋ ಪುರಾಣದ ಕನ್ನಿಕೆಯಂತೆ ಇವಳು ಕಾಣಿಸತೊಡಗುತ್ತಾಳೆ. ಈ ಮಾತುಗಳು ವಿಮರ್ಶೆಯ ಮಾತುಗಳಾಗಬಾರದು, ನಿಜ. ಆದರೆ ಇವಳ ಬದುಕು, ಇವಳ ವ್ಯಕ್ತಿತ್ವ, ವಿಮರ್ಶೆಯನ್ನು, ವಿಮರ್ಶೆಯ ಪರಿಭಾಷೆಯನ್ನು ಧಿಕ್ಕರಿಸಿ ನಿಲ್ಲುವಂತಹವು. ಹೆಣ್ತನದ ಘೋಷಿತ ಮತ್ತು ಹೇರಲ್ಪಟ್ಟ ನಿರ್ಬಂಧಗಳನ್ನೆಲ್ಲಾ ಅನಾಯಾಸವಾಗಿ ಗಾಳಿಗೆ ತೂರಿ ಮಣ್ಣಿನಿಂದ ಆಕಾಶದ ತನಕ ಬೆಳೆದು ಅರಳಿದ ಮಂದಾರ ಪುಷ್ಪದಂತೆ ನನಗಿವಳು ಕಾಣುತ್ತಾಳೆ. ಇವಳನ್ನು ಓದುತ್ತಿದ್ದರೆ ಮನಸ್ಸಿನಲ್ಲಿ ಪ್ರೀತಿಯೂ, ಹೆಮ್ಮೆಯೂ ಒಟ್ಟೊಟ್ಟಿಗೆ ಉಕ್ಕುತ್ತ ಕಣ್ಣಿನಲ್ಲೂ ನೀರು ಹನಿಯುತ್ತದೆ. ಅಳುವುದು ಇವಳಿಗೆ ಮಾಡುವ ಅವಮಾನ ಎಂದು ಬುದ್ಧಿಯು ಎಚ್ಚರಿಸುತ್ತಿದ್ದರೂ ಇದು ಶ್ರದ್ಧಾಂಜಲಿಯ ಕಣ್ಣೀರು ಮಾತ್ರವಲ್ಲ ಪ್ರೀತಿ, ಗೌರವದ ನಮನ ಕೂಡ ಎಂದು ನಮಗೆ ನಾವೇ ಸಮಾಧಾನ ಮಾಡಿಕೊಳ್ಳಲೂ ಅವಕಾಶವಿದೆ. ಆದ್ದರಿಂದ, ಇದನ್ನು ಪುಸ್ತಕ ಪರಿಚಯವೆಂದೋ, ಪುಸ್ತಕ ವಿಮರ್ಶೆಯೆಂದೋ ಓದುವ ದರ್ದಿಲ್ಲ. ಇದು ನಾವೆಲ್ಲರೂ ಓದಬೇಕಾದ ಕಾವ್ಯ ವ್ಯಕ್ತಿತ್ವ ಎಂದು ಮಾತ್ರ ಹೇಳಬಲ್ಲೆ. ಹಾಗೆ ನೋಡಿದರೆ ನೂರ್ ಇನಾಯತ್ ಖಾನ್ ಎನ್ನುವ ಈ ಹೆಣ್ಣು ಮಗಳ ಬದುಕು ಶುದ್ಧ ಅಸಂಗತ ನಾಟಕದಂತೆಯೂ ಕಾಣಿಸುತ್ತದೆ. ಎಲ್ಲಿಯ ಟಿಪ್ಪು ಸುಲ್ತಾನ್? ಎಲ್ಲಿಯ ಲಂಡನ್? ಎಲ್ಲಿಯ ಪ್ಯಾರೀಸ್? ಎಲ್ಲಿಯ ಎರಡನೆಯ ಮಹಾಯುದ್ಧ? ಎಲ್ಲಿಯ ಗೂಢಚಾರಿಣಿ?

ನೂರ್ ಇನಾಯತ್ ಖಾನ್‌ಳ ಮುತ್ತಜ್ಜ ಮೌಲಾ ಭಕ್ಷ್. ಈ ಮೌಲಾ ಮೈಸೂರಿಗೆ ಬಂದದ್ದು ಕರ್ನಾಟಕ ಸಂಗೀತವನ್ನು ಕಲಿಯಲೆಂದು. ಆದರೆ ಸಂಗೀತ ಕಲಿತದ್ದು ಮೈಸೂರಿನಲ್ಲಲ್ಲ. ಇನ್ನೂ ದಕ್ಷಿಣದಲ್ಲಿ. ಕರ್ನಾಟಕ ಸಂಗೀತವನ್ನು ಈತನಿಗೆ ಕಲಿಸಿದವರು ಬ್ರಾಹ್ಮಣೇತರರ ನೆರಳು ಮೈಕ್ ಮೇಲೆ ಬಿದ್ದರೂ ಸ್ನಾನ ಮಾಡಿ ಬರುತ್ತಿದ್ದ ಮಹಾ ಬ್ರಾಹ್ಮಣ ಸುಬ್ರಹ್ಮಣಿ ಅಯ್ಯರ್. ಈತನ ಪ್ರತಿಭೆಗೆ ಮೆಚ್ಚಿ